ಮೂಲ ದಾವಾ ಸಂಖ್ಯೆ 88/2015 ಡಿ ಡಬ್ಲ್ಯೂ 2 ಹೆಚ್ ಇಮಾಮ್ ಸಾಬ್
ಬಿನ್ ಹೆಚ್ ಪೀರಾಸಾಬ್

(ದಿನಾಂಕ 20.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು ವಾದಿ ಪರ ಶ್ರೀ ಎ ಸಿ ಎಸ್ ವಕೀಲರಿಂದಃ-

ನಾನು 57 ವರ್ಷದಿಂದ ಹಗರಿಬೊಮ್ಮನಹಳ್ಳಿ ಯಲ್ಲಿ ವಾಸಿಸುತ್ತಿದ್ದೇನೆ. 1 ಮತ್ತು 2 ನೇ ಪ್ರತಿವಾದಿಯು ನನಗೆ ಪರಿಚಯಸ್ಥರು. ನಾನು ಬಿಲ್ಡಿಂಗ್ ಕಟ್ಟಡ ಕೆಲಸ ಮಾಡುತ್ತೇನೆ. ನಾನು ಅವಿದ್ಯಾವಂತ. ಸದರಿ ದಾವೆಯನ್ನು 1 ಮತ್ತು 2 ನೇ ಪ್ರತಿವಾದಿಯರ ವಿರುದ್ಧ ವಾದಿಯಾದ ಶ್ರೀಮತಿ ಲೀಲಾವತಿಯವರು ಸಲ್ಲಿಸಿರುತ್ತಾರೆ. ಮೂಲತಃ ಸದರಿ ದಾವಾ ಸ್ವತ್ತು ಹೊನ್ನೂರ ಸಾಬ್ ಅವರಿಗೆ ಸಬಂಧಪಟ್ಟಂತಹ ಸ್ವತ್ತಾಗಿರುತ್ತದೆ. ಸದರಿ ದಾವಾ ಸ್ವತ್ತಿನ ಮೂಲ ಸ್ವತ್ತು ಮೊದಲು 100 x 45 ಆಗಿತ್ತು. ಸದರಿ ದಾವಾ ಸ್ವತ್ತಿನಲ್ಲಿ 45 x 50 ಚದರ ಅಡಿ ಸ್ವತ್ತನ್ನು ನಾಣ್ಯಪುರ ಹನುಮಂತ ಶೆಟ್ಟಿಯವರಿಗೆ ಮಾರಾಟ ಮಾಡಲಾಗಿತ್ತು. ಉಳಿದ 45 x 50 ಚದರ ಅಡಿಗಳ ಸ್ವತ್ತು 1 ಮತ್ತು 2 ನೇ ಪ್ರತಿವಾದಿಗಳಿಗೆ ಉಳಿದಿರುತ್ತದೆ ಎಂದರೆ ಸರಿ. ನಾಣ್ಯಪುರ ಹನುಮಂತ ಶೆಟ್ಟಿಯವರಿಂದ ವಾದಿಯ ಗಂಡ ನಾರಾಯಣಪ್ಪನವರು 45 x 50 ಚದರ ಅಡಿಗಳ ಸ್ವತ್ತನ್ನು ಖರೀದಿಸಿದ್ದರು. 1 ಮತ್ತು 2 ನೇ ಪ್ರತಿವಾದಿಯರ ಸ್ವತ್ತು 45 x 50 ಚದರ ಅಡಿಗಳು ಮಾತ್ರ ಇದ್ದು ಪುನಃ ಅವರು ಪೂರ್ವ, ಪಶ್ಚಿಮ ಹಾಗೂ ಉತ್ತರ ದಕ್ಷಿಣಕ್ಕೆ ಯಾವುದೇ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ. 15 ವರ್ಷಗಳ ಮೇಲೆ 1 ಮತ್ತು 2 ನೇ ಪ್ರತಿವಾದಿಯರು ಸ್ಟೇರ್ ಕೇಸನ್ನು ಕಟ್ಟಿರುತ್ತಾರೆ . ಈ ರೀತಿ ಕಟ್ಟುವ ಸಮಯದಲ್ಲಿ ವಾದಿಯು ಸದರಿ ಸ್ಥಳವು ಆಕೆಗೆ ಸಂಬಂಧಪಟ್ಟಂತಹ ಸ್ಥಳವಾಗಿರುತ್ತದೆ ಎಂದು ತಕರಾರನ್ನು ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಚಿಂತ್ರಪಳ್ಳಿ ಗ್ರಾಮ ಪಂಚಾಯತಿಯ ಸದಸ್ಯ ನಾಗಿದ್ದೆ ಎಂದರೆ ಸರಿ. ದಾವಾ ಆಸ್ತಿಯ ಬಗ್ಗೆ ವಾದಿ ಮತ್ತು ಪ್ರತಿವಾದಿಯರು ಗಲಾಟೆ ಮಾಡಿಕೊಂಡಂತಹ ವಿಷಯ ನನಗೆ ಗೊತ್ತಿರುತ್ತದೆ. ನಾನು ಅದೇ ವಾರ್ಡಿನ ಗ್ರಾಮ ಪಂಚಾಯತಿ ಸದಸ್ಯನಾಗಿದ್ದ ಕಾರಣ ನನಗೆ ಜಗಳ ಬಗ್ಗೆ ಗೊತ್ತಿತ್ತು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 3-4 ಬಾರಿ ಸರ್ವೆಯನ್ನು ಮಾಡಿಸಿರುತ್ತಾರೆ.

ಮೂಲ ದಾವಾ ಸಂಖ್ಯೆ 88/2015 ಡಿ ಡಬ್ಲ್ಯೂ 2 ಹೆಚ್ ಇಮಾಮ್ ಸಾಬ್
ಬಿನ್ ಹೆಚ್ ಪೀರಾಸಾಬ್

ಸ್ಟೇರ್ ಕೇಸನ್ನು ಕಟ್ಟುವ ಸಮಯದಲ್ಲಿ ದಿನಾಂಕ 16.02.2015 ರಂದು ವಾದಿಯು ಗ್ರಾಮ ಪಂಚಾಯತಿಗೆ ತಕರಾರನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ1 ನೇ ಪ್ರತಿವಾದಿಯು ಪರವಾನಗೆಯನ್ನು ಪಡೆದು ಕೊಂಡಿರುವ ಬಗ್ಗೆ ಅವರು ಹೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ. ಎಷ್ಟು ಜಾಗಕ್ಕೆ ಕಟ್ಟುವ ಸಲುವಾಗಿ ಪರವಾನಗೆಯನ್ನು ಪಡೆದುಕೊಂಡಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪರವಾನಗೆಯಲ್ಲಿ ಎಷ್ಟು ಜಾಗದಿಂದ ಎಷ್ಟು ಜಾಗಕ್ಕೆ ನಿರ್ಮಾಣ ಮಾಡಬೇಕೆಂದು ಬರೆಯಾಲಾಗುತ್ತದೆ ಎಂದರೆ ಸರಿ.

1 ಮತ್ತು 2 ನೇ ಪ್ರತಿವಾದಿಯು ದಾವಾ ಸ್ವತ್ತಿನ ದಕ್ಷಿಣಕ್ಕೆ ಅಕ್ರಮವಾಗಿ ಶೌಚಾಲಯವನ್ನು ನಿರ್ಮಾಣ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ 3 ನೇ ಪ್ರತಿವಾದಿಯು 4 ಅಡಿ ಜಾಗವನ್ನು ಒತ್ತುವರಿ ಮಾಡಿರುತ್ತಾರೆಂದರೆ ಸಾಕ್ಷಿಯು ಸರ್ವೆಯನ್ನು ಮಾಡಿದ್ದು ಯಾವುದೇ ಒತ್ತುವರಿ ಆಗಿರುವುದಿಲ್ಲವೆಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪೂರ್ವ ಪಶ್ಚಿಮ ಉತ್ತರ ದಕ್ಷಿಣಕ್ಕೆ ಯಾವುದೇ ಸರ್ಕಾರಿ ಜಾಗ ಇರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯು ದಾವಾ ಸ್ವತ್ತಿನ ದಕ್ಷಿಣಕ್ಕೆ ಅಕ್ರಮವಾಗಿ ಶೌಚಾಲಯವನ್ನು ನಿರ್ಮಾಣ ಮಾಡಿರುತ್ತಾರೆಂದು ತಕರಾರನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸುಮಾರು 4- 5 ಬಾರಿ ವಾದಿ ಹಾಗೂ ಪ್ರತಿವಾದಿಗಳ ನಡುವೆ ರಾಜಿ ಪಂಚಾಯತಿಯನ್ನು ಮಾಡಲಾಯಿತು. ಪ್ರತಿವಾದಿಯು 45 x 50 ಚದರ ಅಡಿ ಗಿಂತ ಹೆಚ್ಚಿನ ಜಾಗದಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಿರುತ್ತಾರೆಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ಸುಮಾರು 56 ಅಡಿ ಉತ್ತರ ಮತ್ತು ದಕ್ಷಿಣಕ್ಕೆ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು 45 x 50 ಚದರ ಅಡಿಗಿಂತ ಹೆಚ್ಚಿನ ಜಾಗದಲ್ಲಿ ಕಟ್ಟಡವನ್ನು ಕಟ್ಟಿದ್ದರೆ ಅದು ಒತ್ತುವರಿ ಮಾಡಿ ಕಟ್ಟಿದ ಕಟ್ಟಡವಾಗಿರುತ್ತದೆ ಎಂದರೆ ಸರಿ. 1 ರಿಂದ 3 ನೇ ಪ್ರತಿವದಿಯರು ಉತ್ತರ ದಿಂದ ದಕ್ಷಿಣಕ್ಕೆ

ಮೂಲ ದಾವಾ ಸಂಖ್ಯೆ 88/2015 ಡಿ ಡಬ್ಲ್ಯೂ 2 ಹೆಚ್ ಇಮಾಮ್ ಸಾಬ್
ಬಿನ್ ಹೆಚ್ ಪೀರಾಸಾಬ್

ಒತ್ತುವರಿ ಮಾಡಿ ಸ್ಟೇರ್ ಕೇಸ್ ನಿರ್ಮಾಣ ಮಾಡಿರುವ ಸಂಗತಿಯು ನನಗೆ ಗೊತ್ತಿದ್ದರೂ 1 ಮತ್ತು 2 ನೇ ಪ್ರತಿವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ

ಮೂಲ ದಾವಾ ಸಂಖ್ಯೆ 88/2015 ಡಿ ಡಬ್ಲ್ಯೂ 3 ಆರ್ ಹುಸೇನ್ ಬಿನ್ ಖಾಜಾಸಾಬ್

(ದಿನಾಂಕ 20.12.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ವಾದಿ ಪರ ಶ್ರೀ ಎ ಸಿ ಎಸ್ ವಕೀಲರಿಂದಃ-

ನನ್ನ ಪೂರ್ಣ ಹೆಸರು ಆರ್ ಹುಸೇನ್ . ನನ್ನ ತಂದೆಯ ಹೆಸರು ಆರ್ ಖಾಜಾಸಾಬ್ . ನನ್ನ ಅಜ್ಜನ ಹೆಸರು ಅನ್ವರ್ ಸಾಬ್ . ನನ್ನ ಮನೆ ರಾಮನಗರ, ಪಾದಗಟ್ಟೆ ಆಂಜನೇಯ ಸ್ವಾಮೀ ದೇವಸ್ಥಾನದ ಹತ್ತಿರ ಬರುತ್ತದೆ. 1 ಮತ್ತು 2 ನೇ ಪ್ರತಿವಾದಿಯರು ನಮ್ಮ ಮನೆಯ ಅಕ್ಕ ಪಕ್ಕ ಇರುತ್ತಾರೆ. 3 ನೇ ಪ್ರತಿವಾದಿಯು ನನ್ನ ತಾಯಿ. 1 ಮತ್ತು 2 ನೇ ಪ್ರತಿವಾದಿಯರು ವಾದಿಯ ಸ್ವತ್ತನ್ನು ಒತ್ತುವರಿ ಮಾಡಿರುವ ಸಂಗತಿ ನನಗೆ ಗೊತ್ತಿರುತ್ತದೆ. 1 ಮತ್ತು 2 ನೇ ಪ್ರತಿವಾದಿಯರು ದಾವಾ ಸ್ವತ್ತಿನ ದಕ್ಷಿಣಕ್ಕೆ ಸ್ಟೇರ್ ಕೇಸ್ ಹಾಗೂ ಶೌಚಾಲಯವನ್ನು ಕಟ್ಟಿರುತ್ತಾರೆ. ವಾದಿಯು ಚಿಂತ್ರಪಳ್ಳಿ ಗ್ರಾಮ ಪಂಚಾಯತಿಗೆ 1 ಮತ್ತು 2 ನೇ ವಾದಿಯರು ಆಕ್ರಮವಾಗಿ ಆಕೆಯ ಜಾಗದಲ್ಲಿ ಒತ್ತುವರಿಯನ್ನು ಮಾಡಿರುತ್ತಾರೆಂದು ತಕರಾರನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರು ದಾವಾ ಸ್ವತ್ತನ್ನು 2 ಬಾರಿ ಸರ್ವೆಯನ್ನು ಮಾಡಿಸಿರುತ್ತಾರೆ. ನಾನು ಬೇಲ್ದಾರ ಕೆಲಸವನ್ನು ಮಾಡುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರು ಸ್ಟೇರ್ ಕೇಸನ್ನು ಕಟ್ಟುವಾಗ ವಾದಿ ಮತ್ತು ಅವರ ನಡುವೆ ಗಲಾಟೆ ಆಗಿತ್ತು ಎಂದರೆ ಸರಿ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಎರಡು ಬಾರಿ ರಾಜಿ ಪಂಚಾಯತಿನ್ನು ಮಾಡಿದ್ದೆವು ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರ ಜಾಗ 45 x 50 ಚದರ ಅಡಿ ಆಗಿರುತ್ತದೆ. ನನ್ನ ಸ್ಥಳವು 100 x 22 1/2 ಚದರ ಅಡಿ ಆಗಿರುತ್ತದೆ. 1 ಮತ್ತು 2 ನೇ ಪ್ರತಿವಾದಿಯರು 45 x 50 ಚದರ ಅಡಿ ಜಾಗಕ್ಕೆ ಪರವಾನಗೆ ಯನ್ನು ಪಡೆದು ಕಟ್ಟಡವನ್ನು ಕಟ್ಟಿರುತ್ತಾರೆ. ನಾನೇ 1 ಮತ್ತು 2 ನೇ ಪ್ರತಿವಾದಿಯರ ಮನೆಯನ್ನು ಕಟ್ಟಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯರ ಒಟ್ಟು ಜಾಗ 45 x 50 ಚದರ ಅಡಿ . 1 ಮತ್ತು 2 ನೇ ಪ್ರತಿವಾದಿಯರು ಸದರಿ ಸ್ವತ್ತಿನ ಅಕ್ಕ ಪಕ್ಕದಲ್ಲಿ ಯಾವುದೇ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ಉತ್ತರ ದಕ್ಷಿಣಕ್ಕೆ 56 ಚದರ ಅಡಿ ಮನೆಯನ್ನು ಕಟ್ಟಿರುತ್ತಾರೆಂದರೆ ಸರಿಯಲ್ಲ. 1 ಮತ್ತು 2 ನೇ

ಮೂಲ ದಾವಾ ಸಂಖ್ಯೆ 88/2015 ಡಿ ಡಬ್ಲ್ಯೂ 3 ಆರ್ ಹುಸೇನ್ ಬಿನ್ ಖಾಜಾಸಾಬ್

ಪ್ರತಿವಾದಿಯರು ಒಟ್ಟು ಉತ್ತರ ದಕ್ಷಿಣಕ್ಕೆ 56 ಚದರ ಅಡಿ ಜಾಗದಲ್ಲಿ ಇರುತ್ತಾರೆಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನನಗೆ ಇಂಗ್ಲೀಷ್ ಮತ್ತು ಕನ್ನಡ ಓದಲು ಬರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ಉತ್ತರ ದಕ್ಷಿಣಕ್ಕೆ ವಾದಿಯ ಸ್ವತ್ತನ್ನು ಒತ್ತುವರಿ ಮಾಡಿರುವ ಸಂಗತಿ ನನಗೆ ಗೊತ್ತಿದ್ದರೂ, 1 ಮತ್ತು 2 ನೇ ಪ್ರತಿವಾದಿಯರಿಗೆ ಸಹಾಯ ಮಾಡುವ ಉದ್ದೇದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ